ಶ್ರೀ ಎ. ಡಿ. ಬಿಳಿಗೌಡ.—ಅಲ್ಲಿ ಹುಚ್ಚುನಾಯಿಗಳಿಂದ ಕಡಿಸಿಕೊಂಡು ಔಷಧಿಗಾಗಿ ಬರುವ ವರ ಸಂಖ್ಯೆ ಹೆಚ್ಚಾಗಿ ಜನರು ಕ್ಯೂ ನಿಲ್ಲಬೇಕಾಗಿದೆ. ಮಂಡ್ಯ ಜನರಲ್ ಆಸ್ಪತ್ರೆಯಲ್ಲಿ ಮಾತ್ರ ಆದಕ್ಕೆ ಸೌಲಭ್ಯವಿದೆ. ಆದುದರಿಂದ ಶೀಘ್ರವಾಗಿ ಹುಚ್ಚುನಾಯಿ ಕಡಿದವರಿಗೆ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ ಆಸ್ಪತ್ರೆಯಲ್ಲಿ ಅನುಕೂಲ ಕಲ್ಪಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹುಚ್ಚುನಾಯಿಗಳಿದ್ದರೆ ಅವನ್ನು ಕೊಲ್ಲುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ. ಯೆಂಕಟಪ್ಪ.—ತಾಲ್ಲೂಕು ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯಾಗಿ ಬದಲಾಯಿಸಲು ತಾಲ್ಲೂಕು ಅಭಿವೃದ್ಧಿ ಮಂಡಲ ಮತ್ತು ಪುರಸಭೆಗಳು ವಂತಿಗೆ ಕೊಡಬೇಕೆಂದು ಆದೇಶ ಕೊಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಜನರಲ್ ಆಸ್ಪತ್ರೆ ತಾಲ್ಲೂಕು ಮಟ್ಟದಲ್ಲಿ ಮಾಡುವುದಕ್ಕಾಗುವುದಿಲ್ಲ, ಇರುವುದನ್ನು ಅಪ್‌ಗ್ರೇಡ್ ಮಾಡಬೇಕು. ಅದಕ್ಕೆ ಜನರು ಮುಂದೆ ಬಂದು ಸಹಾಯ ನೀಡಿದರೆ ಅನುಕೂಲವಾಗುವುದು ಎಂದು ಹೇಳಿದೆ. ಮೊನ್ನೆ ಗೌರಿಬಿದನೂರಿನವರು ಸುಮಾರು 2 ಲಕ್ಷ ರೂಪಾಯಿಗಳನ್ನು ಕೊಟ್ಟರು. ಇಷ್ಟೇ ಕೊಡಬೇಕೆಂದಿಲ್ಲ, ಅನುಕೂಲವಿರುವವರು ಮುಂದೆ ಬಂದು ಕ್ಯೆರಾದ ಸಹಾಯಮಾಡಿದರೆ ಸರಕಾರ ತನ್ನಲ್ಲರುವುದನ್ನು ಹಾಕಿ ಕೆಲಸಮಾಡಬಹುದು.

ಶ್ರೀ ಕೆ. ಯೆಂಕಟಪ್ಪ.—ತಾಲ್ಲೂಕು ಅಭಿವೃದ್ಧಿ ಮಂಡಲ ಮತ್ತು ಪುರಸಭೆಗಳು ವಂತಿಗೆ ಬಗ್ಗೆ ಬಜೆಟ್ಟಿನಲ್ಲಿ ಅವಕಾಶಮಾಡಿ ಇಂಥ ಆಸ್ಪತ್ರೆ ಮಾಡಬೇಕು ಎಂದು ಕೇಳುವಂತೆ ಆದೇಶ ಕೊಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಕೊಡುವುದಕ್ಕಾಗುವುದಿಲ್ಲ, ಹಣ ಕೊಟ್ಟರೆ ತೆಗೆದುಕೊಳ್ಳುತ್ತೇವೆ ಇದಕ್ಕೆ ಜಿ. ಓ. ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಡಿ. ಬಿಳಿಗೌಡ.—ಗೆಜ್ಜಲಗೆರೆ ಆಸ್ಪತ್ರೆಯನ್ನು ಹತ್ತಾರು ವರ್ಷಗಳ ಹಿಂದೆಯೇ ಮುದ್ದೂರಿಗೆ ವರ್ಗಾಯಿಸಲಾಗಿದೆ. ಈಗ ಗೆಜ್ಜಲಗೆರೆಯಲ್ಲಿ ಆಸ್ಪತ್ರೆಯಿಲ್ಲ, ಹಿಂದಿತ್ತು. ಈಗ ತೆಗೆದಿದ್ದಾರೆ. ಪುನಃ ಅಲ್ಲಿಗೆ ಆಸ್ಪತ್ರೆ ಕೊಡಲು ಸಾಧ್ಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಪರಿಶೀಲಿಸುತ್ತೇವೆ.

Restoration of Annigopalaiah Tank

875. Sri HANJI SHIVANNA (Tarikere).—

Will the Minister for Public Works and Electricity be pleased to state:—

(*a*) the number of years passed after the repairs to Annigopalaiah tank of Ajjampura Hobli in Tarikere Taluk;

(*b*) when the waste-weir of the tank was constructed whether it is repaired now, if not when it will be repaired ;

(*c*) whether a channel has been constructed to facilitate irrigation ;

(*d*) if not, the reasons therefor ?

Sri H. M. CHANNABASAPPA (Minister for Public Works and Electricity) —

(*a*) The restoration work of this tank was done in 1899. The repair work of the tank was done in 1965-66 and 1968-69.

(*b*) The waste-weir of this tank was constructed long back. The repair work of the waste-weir and the channel was done in 1966. At present no repair is needed for these works.

(*c*) Yes.

(*d*) Does not arise as there is a channel.

ಶ್ರೀ ಹಂಜಿ ಶಿವಣ್ಣ.—ವರ್ಷ ವರ್ಷ ಈ ಕೆರೆ ತುಂಬದಿರುವುದರಿಂದ ಬೇರೆ ನೀರಿನ ಸೋರ್ಸಿಗೆ ಅವಕಾಶವಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಎಡಗಡೆ ಫೀಡರ್ ಚಾನಲ್ ಮಾಡಲಾಗಿದೆ, ಬಲಗಡೆ ಒಂದು ಮಾಡಬೇಕೆಂದು ಯೋಜನೆಮಾಡಿ ಇನ್ವೆಸ್ಟಿಗೇಷನ್ ಆಗುತ್ತಿದೆ, ಸಾಧ್ಯವಾದರೆ. ಅದಷ್ಟು ಬೇಗ ಮಾಡುತ್ತೇವೆ.

ಶ್ರೀ ಹಂಜಿ ಶಿವಣ್ಣ.—ಈ ಕೆರೆಗೆ ನೀರಿನ ಸೋರ್ಸ್ ಇಲ್ಲ, ಆದಕೆ ಅವಕಾಶಮಾಡುವುದು ಸೂಕ್ತವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೋರ್ಸ್ ಇಲ್ಲದೆ ಹೇಗೆ ನೀರು ಬರುವುದು ?

Breaching of Bekkinahalla Tank

877. **Sri HANJI SHIVANNA** (Tarikere).—

Will the Minister for Public Works and Electricity be pleased to state;—

(*a*) the number of years passed after the breach of Bekkinahalla Tank of Lingadahalli Hobli in Tarikere Taluk;

(*b*) whether it has come to the notice of the Government that Kallahalu tank in Lingadahalli requires repair badly;

(*c*) whether immediate steps would be taken up to repair the said works ?

Sri H. M. CHANNABASAPPA (Minister for Public Works and Electricity).—

(*a*) About 12 years have passed after the breach of the Bekkinahalla Tank.

(*b*) There is no such tank under this name.

(*d*) The estimate for restoration of Bekkinahalla Tank has been prepared.

ಶ್ರೀ ಹಂಜಿ ಶಿವಣ್ಣ.—ಬೆಕ್ಕಿನಹಳ್ಳದ ಕೆರೆ ಜೀರ್ಣೋದ್ಧಾರದ ಕೆಲಸಕ್ಕೆ ಆಂದಾಜಾಗಿದೆ ಎಂದು ತಿಳಿಸಲಾಗಿದೆ. ಯಾವಾಗಲೂ ಇದೇ ರೀತಿ ಹೇಳುತ್ತಿದ್ದೀರಿ. ಕೆಲಸವಾಗುವುದು ಯಾವಾಗ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಜಂಬದಹಳ್ಳ ಪ್ರಾಜೆಕ್ಟಿಗೂ ಇದಕ್ಕೂ ಸಂಬಂಧವಿದೆ. ಅಹಳ್ಳಕ್ಕೆ ನೀರು ಸರಬರಾಜಾಗುತ್ತಿಲ್ಲ. ಆದುದರಿಂದ ಇದು ವಿಚಾರಮಾಡಿ ಮಾಡಬೇಕಾದ ಕೆಲಸ. ಈ ಹಳ್ಳದಲ್ಲಿ ನೀರು ನಿರಿಯಾಗಿ ಬಾರದಿರುವುದರಿಂದ ಯಾವುದೂ ಮಾಡಬಾರದೆಂದು ಅಜ್ಜೆ ಮಾಡಿತ್ತು. ಮತ್ತೆ ಪರಿಶೀಲಿಸಿ ಮಾಡಲು ಸಾಧ್ಯವೇ ಎಂಬುದನ್ನು ನೋಡುತ್ತೇನೆ.